

ರಜೆಯಿದ್ದರೆ ನಿಧಾನ ಏಳು. ಹಬ್ಬವಿದ್ದರೆ ಹೊಸ ಬಟ್ಟೆ, ಹೊಸ ತಿಂಡಿ ಅಂತ ಯಾವುದೋ ಗುಂಗು. ಇದನ್ನು ಮೀರಿ ರಂಗೋಲಿ ಗೀಚಿದರೆ ಬಹಳ ಮುಜುಗರ. ಅಮ್ಮನಿಗೆ ಗೊತ್ತಿಲ್ಲದಂತೆ ಎಲ್ಲಾದರೂ ರಂಗೋಲಿ ಕಲಿತು ಬಂದು, ಮಾಯಾಜಾಲದಂತೆ ರಂಗೋಲಿ ಬರೆಯುವಂತಾದರೆ ಎಷ್ಟು ಚೆನ್ನ ಎಂದು ಸುಹಾನಿ ಎಷ್ಟೋ ಬಾರಿ ಅಂದುಕೊಂಡಿದ್ದಾಳೆ.

ಅಪ್ಪನೋ ಅಮ್ಮನೋ ಪ್ರಸಿದ್ಧರಾಗಿದ್ದಾಗ, ಮಕ್ಕಳ ಮೇಲಿನ ನಿರೀಕ್ಷೆಗಳು ಹೆಚ್ಚಾಗುವುದು ಸಹಜ. ಹೆತ್ತವರ ಪ್ರಸಿದ್ಧಿ ಹಲವು ಬಾರಿ ಮಕ್ಕಳನ್ನು ಕಿರಿಕಿರಿಗೆ ತಳ್ಳುತ್ತದೆ. ಒಂದು ಉದಾಹರಣೆ ನೋಡಿ. ಪರಿಸರವಾದಿಯೊಬ್ಬರ ಮಗ ಅಸೈನ್‌ಮೆಂಟ್ ಮಾಡದೇ ಇದ್ದಾಗ, ಲ್ಯಾಬ್ ರೆಕಾರ್ಡ್ ತಾರದೇ ಇದ್ದಾಗ, ಪ್ರಿನ್ಸಿಪಾಲ್ ಬೈಯುವ ಶೈಲಿ ಭಾರೀ ಮೊನಚಾಗಿರುತ್ತದೆ. 'ನಿನ್ನ ಅಪ್ಪ ನೋಡಿದರೆ ಸಮಾಜಸೇವೆ ಅಂತ ಊರಿಗೆಲ್ಲ ಬುದ್ಧಿ ಹೇಳುತ್ತಾರೆ. ನಿನ್ನ ಕ್ಯಾರೆಕ್ಟರ್ ನೋಡಿದರೆ ಹೀಗೆ'. ಪ್ರಿನ್ಸಿಪಾಲ್ ಬೈಯುತ್ತಿರುವುದು ತನಗೋ ಅಪ್ಪನಿಗೋ ಎನ್ನುವ ಗೊಂದಲ ವಿದ್ಯಾರ್ಥಿಗೆ. ಪ್ರಿನ್ಸಿಪಾಲ್ ಹೀಗೆ ಹೇಳಿದರೆಂದು ಅಪ್ಪನ ಬಳಿ ಹೇಳಿಕೊಳ್ಳಬೇಕೇ... ಅದರಿಂದ ಅವರಿಬ್ಬರ ಸ್ನೇಹ ಹಾಳಾದೀತೆ ಎಂಬಷ್ಟು ಸೂಕ್ಷ್ಮ ಮನಸ್ಥಿತಿಯ ಮಗ ಅವನು.

ಪ್ರಸಿದ್ಧಿಯ ಹೊರ ಮೈ ಬಹಳ ಸುಂದರವಾಗಿರುತ್ತದೆ. ಮಕ್ಕಳು ಪ್ರಸಿದ್ಧರಾಗಬೇಕು ಎನ್ನುವ ಆಸೆ ಪೋಷಕರಿಗೆ ಇರುವುದು ಸಹಜ. ಆದರೆ, ಆ ಪ್ರಸಿದ್ಧಿ ವೇದಿಕೆಯ ಮೇಲಿನ ಪ್ರದರ್ಶನಕ್ಕೆ ಸಂಬಂಧಿಸಿದ್ದಾಗಿರಬೇಕು ಎನ್ನುವುದು ಬಹುತೇಕರ ಅಪೇಕ್ಷೆ. ಆದರೆ, ವೇದಿಕೆಗೆ ಸಲ್ಲದೇ ಇರುವ ಸಾಕಷ್ಟು ವಿಚಾರಗಳು ಬದುಕಿನಲ್ಲಿರುತ್ತವೆ. ಶಾಲೆಯಿಂದ ಬರುವಾಗ ವಾಂತಿ ಮಾಡಿಕೊಂಡು ಸುಸ್ತಾಗಿರುವ ಅಜ್ಜಿಯನ್ನು ಸಂಭಾಳಿಸುವ ಮೊಮ್ಮಗಳು, ಮನೆಯ ಮೂಲೆ ಮೂಲೆಯನ್ನು ಗುಡಿಸಿ, ಟೀವಿ ಸ್ಟ್ಯಾಂಡ್, ವಾರ್ಡ್ ರೋಬ್ ನೀಟಾಗಿಡುವ ಮಗ, ಬಾಲ್ಕನಿಯ ತುಂಬ ಕುಂಡಗಳನ್ನು ರಾಶಿ ಹಾಕಿಕೊಂಡು ಅದರಲ್ಲೇ ಕಾಲ ಕಳೆಯುವ ಮಗಳು ಇವೆಲ್ಲವೂ ಪ್ರಶಂಸನೀಯ ಗುಣಗಳೇ ಅಲ್ಲವೇ

ಅಪ್ಪ ಅಮ್ಮನ ಪ್ರಸಿದ್ಧಿಯು ಮಕ್ಕಳಿಗೆ ಪೂರಕವಾಗಿರಬಹುದು. ಆ ಪ್ರಸಿದ್ಧಿಯ ಬಲದಿಂದ ಅವಕಾಶಗಳನ್ನು ಪಡೆಯಬಹುದು. ಆದರೆ ಎಲ್ಲ ಸಂದರ್ಭಗಳಲ್ಲಿಯೂ ಅದು ಅಷ್ಟೊಂದು ಸುಲಭವಾಗುವುದಿಲ್ಲ. ನಿರೀಕ್ಷೆಗಳ ಮಹಾಪೂರ ಮಕ್ಕಳನ್ನು ಒಂದೋ ಕಂಗೆಡಿಸುತ್ತದೆ, ಇಲ್ಲವೇ ಉಡಾಫೆ, ನಿರಾಕರಣೆ ಅವರ ಮನಸ್ಸನ್ನು ಘಾಸಿಗೊಳಿಸುತ್ತದೆ.

ಹಿಂದೆಲ್ಲ ಮಕ್ಕಳು ವೇದಿಕೆಯ ಮೇಲೆ ಮಿಂಚುವುದಕ್ಕೆ ಇಂದಿನಷ್ಟು ಪ್ರಾಮುಖ್ಯತೆ ಇರಲಿಲ್ಲ. ಹುಡುಗ ಚೆನ್ನಾಗಿ ಹಾಡುತ್ತಾನೆ ಸರಿ. ಆದರೆ ವೇದಿಕೆಯಲ್ಲಿ ಹಾಡುವುದು ಬೇಡ ದೃಷ್ಟಿಯಾಗುತ್ತದೆ ಎಂದು ಅಜ್ಜಿ ಕಟ್ಟುನಿಟ್ಟು ಮಾಡುತ್ತಿದ್ದರು. ಚಿಕ್ಕಂದಿನಲ್ಲಿ ಬರುವ ಪ್ರಸಿದ್ಧಿಯು ಬೆಳವಣಿಗೆಯ ಚಿಗುರನ್ನು ಚಿವುಟಿ ಹಾಕುತ್ತದೆ ಎಂಬ ನಂಬಿಕೆ ಹಿರಿಯರದಾಗಿತ್ತು. ಈಗ ಪರಿಸ್ಥಿತಿ ಬದಲಾಗಿದೆ. ಬೆಳವಣಿಗೆಯ ಚಿಗುರನ್ನು ಜೀವಂತವಾಗಿರಿಸಿಕೊಳ್ಳುತ್ತಲೇ ಪ್ರಸಿದ್ಧಿಯ ಮೆಟ್ಟಿಲುಗಳನ್ನು ಹೇಗೆ ಏರಬೇಕು ಎಂಬುದನ್ನು ಪೋಷಕರು, ಮಾರ್ಗದರ್ಶಕರು ಹೇಳಿಕೊಡಲು ಆರಂಭಿಸಿದ್ದಾರೆ.

ತರುಣಿಯೊಬ್ಬಳು ಅಮ್ಮನಿಗೆ ತಿಳಿಯದಿಂದೆ ಪಕ್ಕದ ಮನೆಯ ಆಂಟಿಯ ಜೊತೆ ಸ್ಕೂಟರ್ ಕಲಿಯುತ್ತಿದ್ದಳು. ಅಮ್ಮನಿಗೆ ವಿಷಯ ತಿಳಿಯಿತು. ಆದರೂ ಅಮ್ಮ ಮನೆಯಿಂದ ಆಚೆ ಬರಲೇ ಇಲ್ಲ. ಅಮ್ಮನಿಗೆ ಗೊತ್ತಿತ್ತು, 'ಅಯ್ಯೋ ಜಾಗ್ರತೆ ಮಗ, ಕಾಲು ಕೊಡು, ಇಂಡಿಕೇಟರ್ ಹಾಕು...' ಎಂಬ ತನ್ನ ಎಚ್ಚರಿಕೆ ಮಗಳಿಗೆ ಕಿರಿಕಿರಿಯುಂಟು ಮಾಡುತ್ತದೆ. ಆ ಅಮ್ಮ ದೂರದಲ್ಲಿ ನಿಂತೇ ಮಗಳಿಗೆ ತಿಳಿಯದಂತೆಯೇ ಅವಳು ಸ್ಕೂಟರ್ ಕಲಿಯುವ ಕಸರತ್ತು ನೋಡುವಳು. ಮಕ್ಕಳ ಓರೆಕೋರೆ ಗೆರೆಗಳಿಗೆ ಒಂದಷ್ಟು ಜಾಗ, ತಪ್ಪುಯಡವಟ್ಟುಗಳಿಗೆ ಸಾಕಷ್ಟು ಅವಕಾಶ ಕೊಡಬೇಕೆನ್ನುವುದನ್ನು ಆ ತಾಯಿ ತಿಳಿದಂತಿದೆ. ಕೆಲವೊಮ್ಮೆ ಮಕ್ಕಳ ಸುಳ್ಳುಗಳ ಹಿನ್ನೆಲೆಯಲ್ಲಿರುವ ಉತ್ಸಾಹವನ್ನು ಗಮನಿಸುವ ವ್ಯವಧಾನವೂ ಪೋಷಕರಿಗೆ ಬೇಕು.

ಬದುಕು ನಂಬಿಕೆಯ ಮೇಲಿನ ಹಗ್ಗದ ನಡಿಗೆ ಅಲ್ಲವೇ?